ಎಂಬ ಬಗ್ಗೆ ನಿಮಗೆ ನಾವೇ ಮಾಹಿತಿ ಕೊಡುತ್ತೇವೆ. ಇಲ್ಲದಿದ್ದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಹಾಕಿ.

**ಶ್ರೀ ಬಿ.ಎನ್. ಬಚ್ಚೇಗೌಡ :** ಅರ್ಧ ಗಂಟೆ ಚರ್ಚೆಗೆ ಹಾಕಿ.

**ಛೇರ್ಮನ್ :** ಅರ್ಧ ಗಂಟೆ ಚರ್ಚೆಗೆ ಹಾಕಲು ಒಪ್ಪಿದ್ದಾರೆ. ಆಯಿತು.

**ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಬಗ್ಗೆ**

**110 (1147) ಶ್ರೀ ಮಹದೇವ ಪ್ರಸಾದ್.ಹೆಚ್.ಎಸ್(ಗುಂಡ್ಲುಪೇಟೆ) :** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಇದುವರೆವಿಗೂ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ; (ವರ್ಷಾವಾರು ಮಾಹಿತಿಯನ್ನು ಒದಗಿಸುವುದು);

ಆ) ಹಾಗಿದ್ದಲ್ಲಿ ಫಲಾನುಭವಿಗಳ ಪೈಕಿ ಎಷ್ಟು ಜನರಿಗೆ ಬಾಂಡ್ ವಿತರಿಸಲಾಗಿದೆ, ಎಷ್ಟು ಬಾಕಿ ಇದೆ;

ಇ) ಹಾಗಿದ್ದಲ್ಲಿ ಈಗಾಗಲೇ ವಿತರಿಸಲಾಗಿರುವ ಬಾಂಡ್‌ಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

**ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :**

ಅ) ಭಾಗ್ಯಲಕ್ಷ್ಮಿ ಯೋಜನೆಯಡಿ ಇದುವರೆವಿಗೂ 9,49,167 ಫಲಾನುಭವಿಗಳನ್ನು ಗುರುತಿಸಲಾಗಿದೆ. ವರ್ಷಾವಾರು ಮಾಹಿತಿಯು ಕೆಳಕಂಡಂತಿದೆ.

| ವರ್ಷ | ಫಲಾನುಭವಿಗಳ ಸಂಖ್ಯೆ |
|---|---|
| 2006–07 | 1,66,728 |
| 2007–08 | 1,33,934 |
| 2008–09 | 4,17,042 |
| 2009–10 | 2,31,463 |
| **ಒಟ್ಟು** | **9,49,167** |

ಆ) 9,49,167 ಫಲಾನುಭವಿಗಳ ಪೈಕಿ 7,20,562 ಫಲಾನುಭವಿಗಳಿಗೆ ಬ್ಯಾಂಡ್ ವಿತರಿಸಲಾಗಿದೆ.

2,28,605 ಫಲಾನುಭವಿಗಳಿಗೆ ಬಾಂಡ್ ವಿತರಿಸಲು ಬಾಕಿ ಇದೆ.

ಇ) ಈಗಾಗಲೇ ವಿತರಿಸಲಾಗಿರುವ ಬಾಂಡ್‌ಗಳಿಗೆ ರೂ. 831.98 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**ಪ್ರಶ್ನೆಯ ಸಂಖ್ಯೆ 110 (1147)**

**ಶ್ರೀ ಟಿ.ಬಿ. ಜಯಚಂದ್ರ (ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ ರವರ ಪರವಾಗಿ)** : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಸಹ ಬಹಳ ವಿವರಣೆ ಹೇಳಿದರು. ಬಹಳ ವಿಶೇಷ ಎಂದರೆ 2006–07 ರಿಂದ ಪ್ರಾರಂಭವಾಗಿ 2009–10ರವರೆಗೆ 9 ಲಕ್ಷದ 49 ಸಾವಿರ ಜನ ಎಂದು ಹೇಳಿದ್ದೀರಿ. 2009–10ಕ್ಕೆ 2 ಲಕ್ಷದ 31 ಸಾವಿರದ 463 ಫಲಾನುಭವಿಗಳು ಎಂದು ಹೇಳಿದ್ದೀರಿ. ಆದರೆ, ಬಾಂಡ್ ವಿತರಿಸಲು ಬಾಕಿ ಇರತಕ್ಕವರು 2 ಲಕ್ಷದ 28 ಸಾವಿರದ 605. ಅಂದರೆ, 2009–10 ರಲ್ಲಿ ಒಬ್ಬರಿಗೂ ಬಾಂಡ್ ಕೊಟ್ಟಿಲ್ಲವೆಂದು ಅರ್ಥ ಬರುತ್ತದೆ. ಬಾಕಿ ಏನಿದೆ ಅದು 2009–10ಕ್ಕೆ ಮಾತ್ರ ಸೀಮಿತವಾಗಿದೆಯೋ ಅಥವಾ 2006–07 ರಿಂದಲೂ 2009–10ರವರೆಗೂ ಇದೆಯೋ?

**ಶ್ರೀ ಪಿ.ಎಂ. ನರೇಂದ್ರಸ್ವಾಮಿ** : ಎಲ್ಲಾ ಸಾಲಿನಿಂದ ಸೇರಿ ಒಟ್ಟು ಬಾಕಿ ಇರತಕ್ಕದ್ದು.

**ಶ್ರೀ ಟಿ.ಬಿ. ಜಯಚಂದ್ರ** : ಮುಖ್ಯಮಂತ್ರಿಗಳು ಏನು ಬಹಳ ಎದೆ ಉಬ್ಬಿಸಿಕೊಂಡು ಈ ಯೋಜನೆ ಬಹಳಷ್ಟು ಮಾಡಿಬಿಟ್ಟಿದ್ದೇನೆಂದು ಹೇಳುತ್ತಾರೆ. ತಮ್ಮ ಪ್ರಣಾಳಿಕೆಯಲ್ಲೂ ಅದೇ ಇದೆ. 2006–07 ರಿಂದ ಬಾಂಡ್‌ಗಳನ್ನು ಕೊಟ್ಟಿಲ್ಲವೆಂದರೆ ಏನು ಅರ್ಥ? ಅವರು ಎಷ್ಟು ಸಲ ಮನೆಯ ಹತ್ತಿರ ಅಲೆಯಬೇಕು? ಏಕೆ ಈ ರೀತಿ ಆಗುತ್ತಿದೆ? 2009–10ನೇ ವರ್ಷ ಇನ್ನು 15 ದಿವಸ ಆದರೆ ಹೋಯಿತು, ಅಷ್ಟರೊಳಗೆ ನೀವು ಬಾಂಡ್‌ಗಳನ್ನು ಕೊಡಬೇಕು. ದುಡ್ಡು deposit ಮಾಡುವುದರಲ್ಲಿ ತೊಂದರೆಯಾಗುತ್ತಿದೆಯೋ? ಯಾವುದರಲ್ಲಿ ತೊಂದರೆಯಾಗುತ್ತಿದೆ? ಬ್ಯಾಕ್‌ಲಾಗ್ 2 ಲಕ್ಷದ 28 ಸಾವಿರದ 600 ಜನ ಏನಿದ್ದಾರಲ್ಲಾ, that is not an ordinary thing.

ನಿಮ್ಮ ಯೋಜನೆ implement ಆಗುತ್ತಿಲ್ಲ ಎನ್ನುವುದಕ್ಕೆ ಇದಕ್ಕಿಂತಾ ಬೇರೆ ಸಾಕ್ಷಿ ಬೇಕಾಗಿಲ್ಲ.

**ಶ್ರೀ ಪಿ.ಎಂ. ನರೇಂದ್ರಸ್ವಾಮಿ :** ಒಂದು correction. ಇದು 2008–09 ರಿಂದ ಹಾಕಿ ಇರುವ ಮಾಹಿತಿ.

**ಶ್ರೀ ಟಿ.ಬಿ. ಜಯಚಂದ್ರ :** ಇದು ಎಷ್ಟರಮಟ್ಟಿಗೆ ಯೋಜನೆಯಿಂದ ಪ್ರಯೋಜನವಾಗಿದೆ? ಬಾಂಡ್ ಕೊಡುವುದರಲ್ಲೇ ಈ ರೀತಿ ಆದರೆ ಇನ್ನು 18 ವರ್ಷ ಆದಮೇಲೆ ಹಣ ಬರುತ್ತದಲ್ಲಾ, ಅವರ ಅಪ್ಪನ ಆಣೆಗೂ ಹಣ ಬರುವುದಿಲ್ಲ. ಏಕೆಂದರೆ ಅವರು ಹಾಕಿರುವ ಕಂಡೀಷನ್ ಆ ರೀತಿ ಇದೆ. ಆ ಕಂಡೀಷನ್ ಪ್ರಕಾರ ಒಬ್ಬರಿಗೂ ದುಡ್ಡು ಬರುವುದಿಲ್ಲ. ಯಾವುದೋ, ಒಂದು insurance company ಗೆ ಸಹಾಯ ಮಾಡುವುದು ಒಂದನ್ನು ಬಿಟ್ಟರೆ ಬೇರೆ ಏನೂ ಆಗಿಲ್ಲ.

**ಶ್ರೀ ವೆಂಕಟರಾವ್ ನಾಡಗೌಡ :** ನಾನು ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಕೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ 2006–07ರಿಂದ 1004 ಫಲಾನುಭವಿಗಳ ಒಟ್ಟಿ ಇದೆ. ಅವರಿಗೆ ಕೊಟ್ಟಿಲ್ಲ. ನನ್ನ ಹತ್ತಿರ ಆ ಪಟ್ಟಿ ಸಹ ಇದೆ.

**ಶ್ರೀ ಹೆಚ್.ಕೆ.ಕುಮಾರಸ್ವಾಮಿ :** ಸಚಿವರು ಉತ್ತರ ಕೊಟ್ಟಿದ್ದಾರೆ. ಕಳೆದ ವರ್ಷ 2009–10ರಲ್ಲಿ ಒಂದೇ ಒಂದು ಬಾಂಡ್ ಇಲ್ಲಿಯವರೆಗೆ ವಿತರಣೆ ಮಾಡಿಲ್ಲ. ಫಲಾನುಭವಿಗಳಿಗೆ possession ಗೆ ಕೊಟ್ಟಿಲ್ಲ. ಮುಖ್ಯಮಂತ್ರಿಗಳು ಹೇಳುತ್ತಾರೆ, Action Taken Report ನಲ್ಲಿ 8 ಲಕ್ಷದ 41 ಸಾವಿರ ಎಂದು ಹೇಳಿದ್ದಾರೆ. ಈಗಾಗಲೇ 9 ಲಕ್ಷದ 49 ಸಾವಿರ ಎಂದು ಹೇಳುತ್ತಿದ್ದಾರೆ. ಒಂದು ವಾರದಲ್ಲಿ ಹೇಳುತ್ತೀರತಕ್ಕ ಅಂಕಿಅಂಶದ ವ್ಯತ್ಯಾಸ. 2009–10ನೇ ಸಾಲಿಗೆ ಇದುವರೆಗೆ ಸರ್ಕಾರ ಯಾರಿಗೂ ಕೂಡ, ಯಾವುದೇ ಪೋಷಕರಿಗೂ, ತಂದೆತಾಯಿಯರಿಗೆ ಬಾಂಡ್‌ನ್ನು ವಿತರಣೆ ಮಾಡಿಲ್ಲ. ಇನ್ನೂ ಕೂಡ possession ಕೊಟ್ಟಿಲ್ಲ. ಹಾಸನ ಜಿಲ್ಲೆ ಮತ್ತು ನನ್ನ ಕ್ಷೇತ್ರ ಸಕಲೇಶಪುರದಲ್ಲಿ ಇದುವರೆಗೆ ಒಂದು ಮಗುವಿನ ತಂದೆತಾಯಿಯರಿಗೂ ಬಾಂಡ್‌ನ್ನು ಕೊಟ್ಟಿಲ್ಲ.

**ಶ್ರೀ ಪಿ.ಎಂ. ನರೇಂದ್ರಸ್ವಾಮಿ :** ಅರ್ಜಿಗಳನ್ನು ಸ್ವೀಕರಿಸಿ ಎಲ್.ಐ.ಸಿ.ಗೆ ಬಾಂಡ್‌ನ್ನು ಒದಗಿಸುವುದಕ್ಕೆ ಇಲಾಖೆಯಿಂದ ಕೋರಿಕೆಯನ್ನು ಸಲ್ಲಿಸಿದ್ದೇವೆ. ಹಣಕಾಸು ಇಲಾಖೆಯಿಂದ ಹಣಕಾಸಿನ ಬಿಡುಗಡೆ ಅನ್ವಯ ಹಂತ ಹಂತವಾಗಿ ಬಿಡುಗಡೆಯಾಗುತ್ತದೆ. ಅವರೇನು 2009–10ನೇ ಸಾಲಿನ ಬಗ್ಗೆ ಹೇಳುತ್ತಿದ್ದಾರೋ 15ನೇ ತಿಂಗಳಿನ ತನಕ, ಅಂದರೆ ಈ ವರ್ಷದ ಕೊನೆಯವರೆಗೆ ಅವರು ಅರ್ಜಿ ಕೊಡಲು ಅವಕಾಶ ಇರುತ್ತದೆ. ಆದ್ದರಿಂದ 2009–10ರಲ್ಲಿ ಏನು ಬೇಡಿಕೆ ಬಂದಿದೆಯೋ ಈ ವರ್ಷದ ಹಣಕಾಸಿನ ಬಿಡುಗಡೆಯ ನಂತರ ಬಾಂಡ್‌ನ್ನು ವಿತರಣೆ ಮಾಡಲಾಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ :** 2008–09 ರಲ್ಲಿ 4 ಲಕ್ಷದ 17 ಸಾವಿರ ಇದೆ. ಅದರಲ್ಲಿ ಬಾಂಡ್ ಕೊಡಲು ಎಷ್ಟು ಬಾಕಿ ಇದೆ?

**ಶ್ರೀ ಪಿ.ಎಂ. ನರೇಂದ್ರಸ್ವಾಮಿ :** 2008–09 ಮತ್ತು 2009–10ರ ವಿಚಾರವಾಗಿ ಬಾಂಡ್ ವಿತರಣೆಯ ಸಂದರ್ಭದಲ್ಲಿ ಆಗಿರುವ technical problem correct ಮಾಡುವುದಕ್ಕೋಸ್ಕರ ಇಲಾಖೆಯ ವತಿಯಿಂದ ಕ್ರಮಕ್ಕೈಗೊಳ್ಳುತ್ತಿದ್ದೇವೆ. ಅತೀ ಶೀಘ್ರದಲ್ಲಿ ಮಾಡುತ್ತೇವೆ.

**ಶ್ರೀ ಟಿ.ಬಿ. ಜಯಚಂದ್ರ :** ಭಾಗ್ಯ ಲಕ್ಷ್ಮಿ ಎಂದು ಹೇಳಬೇಡಿ, ಬರೀ ಲಕ್ಷ್ಮಿ ಎಂದು ಹೇಳಿ! ಅದು ಯಾರಿಗೋ ಲಕ್ಷ್ಮಿಯಾಗುತ್ತದೆ! ಆದ್ದರಿಂದ ಭಾಗ್ಯ ಎಂದು ಹೇಳುವುದು ಬೇಡ.

**ಶ್ರೀ ಪಿ.ಎಂ. ನರೇಂದ್ರ ಸ್ವಾಮಿ :** ಮಾನ್ಯ ಸದಸ್ಯರು ಮಾಡುತ್ತಿರುವ ಆರೋಪದಲ್ಲಿ, ಎಲ್. ಐ.ಸಿ. ಸಂಸ್ಥೆ ಕೇಂದ್ರ ಸರ್ಕಾರದ ಸಂಸ್ಥೆ, ವಿಶೇಷವಾಗಿ ಇಲಾಖೆಯ ವತಿಯಿಂದ ನಾವು ಆ ಸಂಸ್ಥೆಗೆ 2006–07ರಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಸಂಸ್ಥೆ ಮಾತ್ರ eligibility ಬಂತು. ಅದರಲ್ಲಿ technical bid ನಲ್ಲಿ ಎಲ್.ಐ.ಸಿ. ಒಂದೇ ಒಂದು ಸಂಸ್ಥೆ ಇದಕ್ಕೆ ಅರ್ಹವೆಂದು ಆಯ್ಕೆಯಾಗಿರುವುದರಿಂದ ಅದಕ್ಕೆ ಅನಿವಾರ್ಯವಾಗಿ ಕೊಡಬೇಕಾಗಿ ಬಂತು. ಇದು ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವುದರಿಂದ ಇದರ ಬಗ್ಗೆ ಯಾರೂ ಅನುಮಾನ ಪಡುವ ಅವಶ್ಯಕತೆ ಇಲ್ಲ.

**ಶ್ರೀ ಟಿ.ಬಿ. ಜಯಚಂದ್ರ :** ಅವರಲ್ಲಿ ಎಷ್ಟು ಹಣವನ್ನು deposit ಇಡುತ್ತೀರಿ?

**ಶ್ರೀ ಪಿ.ಎಂ. ನರೇಂದ್ರಸ್ವಾಮಿ :** 20 ಸಾವಿರ.

**ಶ್ರೀ ಟಿ.ಬಿ. ಜಯಚಂದ್ರ** : ಆ 20 ಸಾವಿರವನ್ನು ಬ್ಯಾಂಕ್‌ನಲ್ಲಿ ಇಟ್ಟುಬಿಡಿ. 18 ವರ್ಷಗಳಾದ ಮೇಲೆ ಎಷ್ಟು ಬರುತ್ತದೆ ಲೆಕ್ಕಾ ಹಾಕಿ. ನಿಮ್ಮ ವಿಮಾ ಕಂಪನಿ ಕೊಡುವುದಕ್ಕಿಂತಾ ಜಾಸ್ತಿ ಬರುತ್ತದೆ.

**ಶ್ರೀ ಪಿ.ಎಂ.ನರೇಂದ್ರಸ್ವಾಮಿ** : ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇದರ ಹಣವನ್ನು ಇಡತಕ್ಕದ್ದಲ್ಲ. ವಿಮಾ ಸಂಸ್ಥೆಯಲ್ಲೇ ಹಣವನ್ನು ಇಡತಕ್ಕದ್ದು. 2006–07 ರಲ್ಲಿ ಈ ಕಂಡೀಷನ್ ಆಧಾರದ ಮೇಲೆ ತೆಗೆದುಕೊಂಡಿರುವ ನಿರ್ಣಯ ಇದಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಬ್ಯಾಂಕ್‌ನಲ್ಲಿ ಬರುವ ಬಡ್ಡಿಯ ಆಧಾರದ ಮೇಲೆ, ಮುಂದೆ ಏನಾಗುತ್ತದೆ ಎಂಬುದರ ಮೇಲೆ ನಾವು ನಿರ್ಣಯ ಕೈಗೊಂಡಿಲ್ಲ. ವಿಮಾ ಸಂಸ್ಥೆಯೇ ಇದರಲ್ಲಿ ಒಳಗೊಂಡು ಅದರಲ್ಲೇ ಇಡುಗಂಟನ್ನು ಇಡಬೇಕು ಎಂಬ ನಿರ್ಣಯದ ಅಡಿಯಲ್ಲಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮ ಇದಾಗಿದೆ.

**ಶ್ರೀ ಉಮೇಶ್ ವಿ. ಕತ್ತಿ** : ಇದರಲ್ಲಿ ಆರೋಗ್ಯವೂ ಕವರ್ ಆಗಿರುತ್ತದೆ.

**ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿ ಕೊರೆಯುವುದು**

**112 (1137) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ)** : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ (ಕಳೆದ 3 ವರ್ಷಗಳಲ್ಲಿ) ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ 3 ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);